ಜೀವ ಹೋದ ಅನುಭವದಲ್ಲೇ ಕಾಲ ನೂಕಿದರು. ಮನೆಯ ಅಂಗಳದ ಹೂಗಿಡಗಳ ಮೌನದಲ್ಲಿ, ಮಲಗುತ್ತಿದ್ದ ಖಾಲಿ ಮಂಚದಲ್ಲಿ, ಅಡುಗೆ ಮನೆಯ ಡಬ್ಬಗಳ ಹೊಳಪಿನಲ್ಲಿ, ಪಾತ್ರೆಗಳ ಸದ್ದಿನಲ್ಲಿ, ಚಹಾದ ಕಂಪಿನಲ್ಲಿ ಸಂಚಯಿಸಿರುವ ನೆನಪಿನ ನೆರಳಲ್ಲಿ ಅವಳು ಹಾಜರಾಗುತ್ತಿದ್ದಳು. ಅವರ ಜೀವನದ ಹಲವು ಸಂಗತಿಗಳ ಕೊಂಡಿ ಸಂಗಾತಿಯಾಗಿ ಏಕಾಂತದಲ್ಲಿ ಜೊತೆಯಾದದ್ದು ರೇಡಿಯೊ ಮಾತ್ರ. ಅವರ ಬಾಲ್ಯವನ್ನು ಬೆಳಗಿದ ಕನ್ನಡದ ಹಳೆಯ ಚಿತ್ರಗೀತೆಗಳ ಮಧುರ ವಾಹಿನಿಯ ಮೂಲಕ ಖಾಲಿತನವನ್ನು ಸಹಿಸಿಕೊಳ್ಳುತ್ತಿದ್ದರು. ಅದೊಂದು ಬಗೆಯ ಮೋಹಕ ದುಃಖ. ಗೀತೆಗಳನ್ನು ಆಲಿಸುತ್ತಿದ್ದಾಗ ಕಲ್ಯಾಣಿಯೂ, ಅವು ಮನಮುದ್ರೆಯಲ್ಲಿ ಅನುರಣಿಸುತ್ತಿರುವಾಗ ಹೆಂಡತಿಯೂ ಯುಗಳ ಭಾವದಲ್ಲಿ ಸತಾಯಿಸುತ್ತಿದ್ದರು. ದಿವಂಗತಳ ಫೋಟೊ ಬದಲು ಹೊಸ್ತಿಲ ಚೌಕಟ್ಟಿನ ಮೇಲೆ ಮೊಳೆಗೆ ನೇತು ಹಾಕಿದ, ಅವಳು ಕಟ್ಟುತ್ತಿದ್ದ ಹೃದಯದಂತಹ ವಾಚು ಜೀವಮಿಡಿತ ನಿಲ್ಲಿಸಿರಲಿಲ್ಲ. ಅದು ಕಲ್ಯಾಣಿ ಕೊಟ್ಟ ವಾಚು. ರಾವ್ ಅವರ ಮದುವೆಗೆ ಅವಳು ನೀಡಿದ ಉಡುಗೊರೆ. ಚಾವಿ ತಿರುವಿ ಅದರ ಉಸಿರು ನಿಲ್ಲದಂತೆ ಅವರು ಕಾಳಜಿ ವಹಿಸಿದ್ದಾರೆ. ನಿಧಾನವಾಗಿ ಈ ನೆನಪೂ ತೀವ್ರತೆ ಉಳಿಸಿಕೊಳ್ಳದೆ ದಿನಚರಿಯಲ್ಲಿ ಯಾಂತ್ರಿಕವಾಯಿತು. ಹೆಂಡತಿ ಅಗಲಿದ ಬಳಿಕ ಕಾಲದ ದಾಸ್ತಾವೇಜಿನಲ್ಲಿ ಸಹಜವಾಗಿ ದಾಖಲಾಗಿ ಉಳಿದ ಸ್ಮಶಾನ ನೆನಪುಗಳ ಸಮಾಧಿಯ ಸುತ್ತ ಓಡಾಡತೊಡಗಿದ ಕಲ್ಯಾಣಿಯ ಹಠಾತ್ ದರ್ಶನ ಮಾತ್ರ ರಾವ್ ಅವರನ್ನು ಅಚ್ಚರಿಗೊಳಿಸಿತ್ತು. ಸದಾ ತನ್ನನ್ನು ಗಮನಿಸುತ್ತಿರುವ ಹೃದಯ ಮಿಡಿತದ ವಾಚಿನ ದುಂಡು ಮುಖ ಕಲ್ಯಾಣಿಯದ್ದೋ ಹೆಂಡತಿಯದ್ದೋ ತಿಳಿಯದೆ ಅವರು ಸಂಕಟಕ್ಕೀಡಾಗಿದ್ದರು.

ಕಲ್ಯಾಣಿ ಕುಲಕರ್ಣಿ ಧಾರವಾಡ ಹತ್ತಿರದ ನಿಗದಿಯವಳು. ವಿಶ್ವವಿದ್ಯಾಲಯದ ಗೋಪುರ ಏರಿದರೆ ಅಥವಾ ಟೈವಾಕ್ ಗಡಿಯಾರ ಫ್ಯಾಕ್ಟರಿಯ ಹಿಂದಿನ ಬೇಂದ್ರೆಯವರ ಮೂಡಲಮನೆಯ ಕೊಳ್ಳದ ಗುಂಟ ಹಾಯುವ ನೋಟ ಮಂಜು ಮಬ್ಬಿನ ನಿಗದಿ ಊರನ್ನು ನೇರ ತಲುಪುತ್ತದೆ. ಕಲ್ಯಾಣಿ ಹೊಸಬರ ಮೊದಲ ಭೇಟಿಯಲ್ಲಿ ತನ್ನನ್ನು ಪರಿಚಯಿಸಿಕೊಳ್ಳುವಾಗ ಬೇಂದ್ರೆಯವರ ಬೆಳಗಿನೊಂದಿಗೆ ಗುರುತಿನ ಈ ಎರಡು ಜನಪ್ರಿಯ ಸ್ಥಾವರಗಳನ್ನು ಉಲ್ಲೇಖಿಸದೆ ಇರುತ್ತಿರಲಿಲ್ಲ. ಶಂಕರ್ ರಾವ್ ಮತ್ತು ಕಲ್ಯಾಣಿ ಇಬ್ಬರೂ ಕರ್ನಾಟಕ ಕಾಲೇಜಿನಲ್ಲಿ ಮತ್ತು ಯೂನಿವರ್ಸಿಟಿಯ ಸಂಗೀತ ವಿಭಾಗದಲ್ಲಿ ಹಿಂದೂಸ್ತಾನಿ ಹಾಡುಗಾರಿಕೆಯನ್ನು ಜೊತೆಯಲ್ಲಿ ಅಭ್ಯಾಸ ಹಾಗೂ ಆರಾಧನೆ ಮಾಡಿದವರು. ರಾವ್ ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಸೇವೆ ಆರಂಭಿಸಿದ ನಂತರ ಅವರ ಹಾಡುಗಾರಿಕೆ ಹಿನ್ನೆಲೆಗೆ ಸರಿಯಿತು. ರೇಡಿಯೊ ನಾಟಕಗಳಿಗೆ ಹಿನ್ನೆಲೆ ಗಾಯಕನಾಗಿ, ವಿಶೇಷ ಹಬ್ಬದ ಸಂದರ್ಭದಲ್ಲಿ ಸುಗಮ ಸಂಗೀತ ಕಲಾವಿದನಾಗಿ ಹಾಡುವುದಕ್ಕೆ ಸೀಮಿತವಾಯಿತು. ಕಲಾಭವನದಲ್ಲಿ ಜರಗುತ್ತಿದ್ದ ಅಹೋರಾತ್ರಿ ಸಂಗೀತೋತ್ಸವದಲ್ಲಿ ಅವರು ಅಕ್ಕಪಕ್ಕ ಕುಳಿತೇ ಸಂಗೀತ ಆಸ್ವಾದನೆ ಮಾಡುತ್ತಿದ್ದರು. ಕುಂದಗೋಳದ ನಾಡಗೇರ್ ವಾಡೆಯ ಸಂಗೀತೋತ್ಸವವನ್ನೂ ಅವರು ತಪ್ಪಿಸುತ್ತಿರಲಿಲ್ಲ. ಕಲ್ಯಾಣಿ ಆಕಾಶವಾಣಿಯ ನಿಲಯ ಕಲಾವಿದೆಯಾಗಿ ತೇರ್ಗಡೆಯಾದ ಬಳಿಕ ವರ್ಷಕ್ಕೆ ಐದಾರು ಕಛೇರಿಗಳು ಪ್ರಸಾರವಾಗುತ್ತಿದ್ದವು. ಒಮ್ಮೊಮ್ಮೆ ಸ್ಟುಡಿಯೋದಲ್ಲಿ ಅವಳ ಗಾಯನ ರೆಕಾರ್ಡ್ ಮಾಡುವುದು, ತಂಬೂರಿ ಸಾಥ್ ಕೊಡುವುದು ರಾವ್ ಅವರ ಹೆಚ್ಚುವರಿ ಕರ್ತವ್ಯವಾಗುತ್ತಿತ್ತು. ಪ್ರತಿ ರೆಕಾರ್ಡಿಂಗ್ ಬಳಿಕ ಕಲ್ಯಾಣಿ, 'ಈ ಸಲಾ ಚಲೋ ಆಗ್ಲಿಲ್ಲ ನಂದು' ಎಂದು ಬೇಸರಿಸಿದರೆ ರಾವ್, 'ಹಾಂಗ್ ಅನ್ನೂದಿಲ್ಲ ನನಗ' ಎಂದು ಸಮಾಧಾನ ಮಾಡುತ್ತಿದ್ದರು. ರೆಕಾರ್ಡಿಂಗ್ ಮುಗಿಯುವಷ್ಟರಲ್ಲಿ ಸಂಜೆ ಆಗುತ್ತಿತ್ತು. ಅದೇ ಸಮಯಕ್ಕೆ ರಾವ್ ಅವರ ಪಾಳಿ ಶಿಫ್ಟ್ ಆದರೆ ಅವರು ಕಲ್ಯಾಣಿಯನ್ನು ಹಳಿಯಾಳ ಕ್ರಾಸಿನವರೆಗೆ ಜೊತೆಯಲ್ಲಿ ಹೋಗಿ ನಿಗದಿ ಬಸ್ ಹತ್ತಿಸಿ ಹೋಗುತ್ತಿದ್ದರು.

ಒಮ್ಮೆ ಸ್ಟುಡಿಯೊದಲ್ಲಿ ರೆಕಾರ್ಡಿಂಗ್ ಮುಗಿಸಿ

